# ದಾಸರೆಂದರೆ ಪುರಂದರದಾಸರಯ್ಯಾ....

ಡಾ. ಟಿ. ಎನ್. ನಾಗರತ್ನ

**ಕೆರೆಯ ನೀರನು ಕೆರೆಗೆ ಚೆಲ್ಲಿ**
**ವರವ ಪಡೆದವರಂತೆ ಕಾಣಿರೊ**
**ಹರಿಯ ಕರುಣದೊಳಾದ ಭಾಗ್ಯವ**
**ಹರಿಸಮರ್ಪಣೆ ಮಾಡಿ ಬದುಕಿರೊ**

ಪುರಂದರದಾಸರು ಮನುಷ್ಯಮಾತ್ರರಿಗೆ ಬದುಕುವ ದಾರಿಯನ್ನು ತಿಳಿಸಿಕೊಟ್ಟಿರುವ ಪರಿಯಿದು. ನಾನು ನನ್ನದು ಎಂಬ ಹಮ್ಮನಳಿಯುವ ಮಾತು. ಇನ್ನೊಬ್ಬರಿಗೆ ಕೊಟ್ಟು ತೃಪ್ತಿ ಪಡುವ ಸಂಸ್ಕಾರ. ಸ್ವತಃ ಹಾಗೆಯೇ ನಡೆದುಕೊಂಡ ಹಿರಿಯ ಚೇತನ ಪುರಂದರದಾಸರು. ಐನೂರ ಇಪ್ಪತ್ತೊಂಬತ್ತು ವರ್ಷಗಳ ಹಿಂದೆ, ಅಂದರೆ ಕ್ರಿ.ಶ. ೧೪೮೦ ರಲ್ಲಿ ಜನ್ಮತಾಳಿ ೧೫೬೪ ರಲ್ಲಿ ಹರಿಪದವನ್ನು ಸೇರಿದ, ಎಂಬತ್ತೈದು ವರ್ಷಗಳ ತುಂಬುಬಾಳನ್ನು ಬಾಳಿದ ಸಂತರು; ಶ್ರೀಹರಿಯ ಪರಮ ಭಕ್ತರು. ಹುಟ್ಟುತ್ತ ಅವರೂ ನಮ್ಮೆಲ್ಲರಂತೆಯೇ ಲೌಕಿಕದಲ್ಲಿ ಮನಸ್ಸನ್ನು ತೊಡಗಿಸಿಕೊಂಡು ಸತಿ-ಸುತರು, ಧನ-ಧಾನ್ಯಗಳ ವ್ಯಾಮೋಹದಲ್ಲಿ ಬಿದ್ದವರೇ. ಆದರೆ ಅದರಲ್ಲೇ ಮುಳುಗಿಹೋಗದೆ, ಬದುಕಿನ ಬವಣೆಗಳಿಗೆ ಕಾರಣಗಳನ್ನು ಪತ್ತೆಹಚ್ಚಿ ಎಚ್ಚೆತ್ತುಕೊಂಡವರು; ಆ ಬಗ್ಗೆ ತಮ್ಮ ಸುತ್ತಲಿನವರನ್ನೂ ಎಚ್ಚರಿಸಿದವರು. ಆದ್ದರಿಂದಲೇ ಐನೂರು ವರ್ಷಗಳ ಅನಂತರವೂ ಅವರು ಪ್ರಾತಃಸ್ಮರಣೀಯರಾಗಿರುವುದು. ನಮ್ಮ ದುರದೃಷ್ಟವೆಂದರೆ ಇಂಥ ಮಹನೀಯರ ಜೀವನ-ಕೃತಿಗಳ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲದಿರುವುದು. ದಾಸರಾಗುವ ಮುನ್ನ ಅವರು ಹೇಗೆ ಬಾಳಿದರೋ ನಮಗೆ ಖಚಿತವಾಗಿ ಗೊತ್ತಿಲ್ಲ. ಅವರ ಹೆಸರು ಶ್ರೀನಿವಾಸ ನಾಯಕನೋ, ಕೃಷ್ಣಪ್ಪ ನಾಯಕನೋ; ತಂದೆ ವರದಪ್ಪ ನಾಯಕನೋ, ವಿಠಲ ನಾಯ್ಕನೋ; ಹೆಂಡತಿ ಸರಸ್ವತಿಬಾಯಿಯೋ, ಲಕ್ಷ್ಮೀಬಾಯಿಯೋ, ಗೋತಮಿಯೋ; ಜನ್ಮಸ್ಥಳ ಪುರಂದರಗಡವೋ, ಪಾಕಶಾಸನಪುರವೋ; ಪುರಂದರಾಲಯಘಟ್ಟವೋ, ಕ್ಷೇಮಪುರವೋ; ನಿರ್ಯಾಣಸ್ಥಳ ಗದ್ವಾಲದ ವನಪರ್ತಿಯೋ, ಪಂಢರಪುರವೋ, ಹಂಪೆಯೋ – ಯಾವುದೂ ಸ್ಪಷ್ಟವಿಲ್ಲ. ಎಲ್ಲವೂ ಅಂತೆಕಂತೆಗಳ ಸಂತೆ.



ಆದರೆ ಅವರಿಗೆ ಪುರಂದರದಾಸರೆಂಬ ಹೆಸರಿದ್ದುದು ದಿಟ. ೧೫೨೬ ರ ಬಳ್ಳಾರಿ ಜಿಲ್ಲೆ ಕಮಲಾಪುರದ ತಾಮ್ರಶಾಸನದಲ್ಲಿ ಅವರಿಗೆ ಹೇಬಣದಾಸ, ಲಕ್ಷ್ಮಣದಾಸ, ಮಧ್ವಪದಾಸ ಎನ್ನುವ ಮೂವರು ಗಂಡುಮಕ್ಕಳಿದ್ದರು; ಅವರು ವಾಸಿಷ್ಠಗೋತ್ರದ ಯಜುರ್ವೇದಿಗಳು ಎನ್ನುವ ವಿಷಯಗಳು ದಾಖಲಾಗಿವೆ. 'ಪುರಂದರದಾಸಜಃ' ಎಂತಲೇ ಆ ಮಕ್ಕಳನ್ನು ಸಂಬೋಧಿಸಿದೆ. ದೊರೆ ಕೃಷ್ಣದೇವರಾಯ, ರಾಜಗುರುಗಳಾದ ಶ್ರೀವ್ಯಾಸರಾಯರಿಗೆ ದತ್ತಿಯಾಗಿ ಕೊಟ್ಟ ವ್ಯಾಸಸಮುದ್ರವನ್ನು ಅವರು ಮುನ್ನೂರ ಎಂಟು ಮಂದಿ ವಿದ್ವಾಂಸರಿಗೆ ವೃತ್ತಿ ಹಾಕಿಕೊಟ್ಟರು. ಆ ಪೈಕಿ ಪುರಂದರದಾಸರ ಮೂವರು ಮಕ್ಕಳಿಗೂ ವೃತ್ತಿ ದೊರಕಿದೆ. ಅಂತೆಯೇ ಪುರಂದರದಾಸರಿಗೆ ಅಂಕಿತವಿತ್ತ ಗುರುಗಳು ಶ್ರೀವ್ಯಾಸರಾಯರು ಎನ್ನುವ ವಿಷಯ ಪುರಂದರದಾಸರ ಒಂದು ಕೀರ್ತನೆಯಲ್ಲೇ ಇದೆ :

**ಪಂಕಜನಾಭ ಶ್ರೀಪುರಂದರ ವಿಠಲನ**
**ಅಂಕಿತವೆನಗಿತ್ತ ಗುರುವ್ಯಾಸಮುನಿರಾಯ**

ಪುರಂದರದಾಸರು ಹರಿಸಾಯುಜ್ಯ ಪಡೆದದ್ದು ೧೫೬೪ ರಲ್ಲಿ, ರಕ್ತಾಕ್ಷಿ ಸಂವತ್ಸರ, ಪುಷ್ಯಮಾಸದ ಕೃಷ್ಣಪಕ್ಷದ ಭಾನುವಾರದಂದು.

ಇವಿಷ್ಟೇ ಪುರಂದರದಾಸರ ಬಗ್ಗೆ ನಮಗೆ ಈಗ ತಿಳಿದಿರುವ ಐತಿಹಾಸಿಕ ಸತ್ಯಗಳು. ಉಳಿದಂತೆ, ವಿಜಯದಾಸರಾದಿಯಾಗಿ ಎಲ್ಲರ ಕೀರ್ತನೆಗಳಲ್ಲಿ ಬರುವ ವಿವರಗಳಲ್ಲಿ ಒಮ್ಮತವಿಲ್ಲ; ಕಲ್ಪನೆ, ಕಟ್ಟುಕತೆಗಳೇ ಹೆಚ್ಚು. ಪುರಂದರದಾಸರು ಮತ್ತು ವಿಜಯದಾಸರ ನಡುವಣ ಸುಮಾರು ೨೦೦ ವರ್ಷಗಳ ಕಾಲಮಾನದಲ್ಲಿ ಪುರಂದರದಾಸರ ಚರಿತ್ರೆ, ವ್ಯಕ್ತಿತ್ವಗಳು ಒಂದು ರೀತಿಯಲ್ಲಿ ಪವಾಡಸದೃಶವೇ ಆಗಿಬಿಟ್ಟಿತ್ತು. ಹಾಗಾಗಿ 'ಮೂಗುತಿ ಕತೆ'ಯಂತಹ ತಲೆಬಾಲಗಳು ದಾಸರ ಜೀವನದ ಸುತ್ತ ಹೆಣೆದುಕೊಂಡುಬಿಟ್ಟಿವೆ.

ಲೇಖಕಿ ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹರಿದಾಸ ಸಾಹಿತ್ಯ ವಿಭಾಗದ ಮುಖ್ಯಸ್ಥರಾಗಿ ನಿವೃತ್ತಿ ಹೊಂದಿದ್ದಾರೆ. ಇವರು ದಾಸಸಾಹಿತ್ಯದಲ್ಲಿ ಆಳವಾದ ಪರಿಣತಿ ಉಳ್ಳವರು.

ಇನ್ನು, ಪುರಂದರದಾಸರ ಸಾಹಿತ್ಯಸಿರಿಯತ್ತ ಕೊಂಚ ಗಮನ ಹರಿಸೋಣ. ಇದುವರೆಗೂ ಸುಮಾರು ಒಂದು ಸಾವಿರ ಕೃತಿಗಳು – ಕೀರ್ತನೆ, ಸುಳಾದಿ, ಉಗಾಭೋಗಗಳು ಸೇರಿದಂತೆ 'ಪುರಂದರ ವಿಠಲ' ಅಂಕಿತದಲ್ಲಿ ದೊರೆತಿವೆ. ಅವುಗಳನ್ನಾಧರಿಸಿ ದಾಸರ ಬದುಕಿನ ಬಗ್ಗೆ ಕೆಲವು ವಿಷಯಗಳನ್ನು ಗ್ರಹಿಸಬಹುದು. ಒಂದು ಕೀರ್ತನೆಯಲ್ಲಿ ಯಾವುದೋ ಒಂದು ಶುಭಮುಹೂರ್ತದಲ್ಲಿ ಹೆಂಡತಿಯ ದೆಸೆಯಿಂದ ಭಕ್ತಿಯತ್ತ ತಿರುಗಿದರೆಂಬ ಸೂಚನೆಯಿದೆ:

ಆದದ್ದೆಲ್ಲ ಒಳಿತೇ ಆಯಿತು ನಮ್ಮ
ಶ್ರೀಧರನ ಸೇವೆಗೆ ಸಾಧನ ಸಂಪತ್ತಾಯಿತು
ದಂಡಿಗೆ ಬೆತ್ತ ಹಿಡಿಯುವುದಕ್ಕೆ
ಮಂಡೆ ಬಾಗಿ ನಾಚುತಲಿದ್ದೆ
ಹೆಂಡತಿ ಸಂತತಿ ಸಾವಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯ

ಹೀಗೆ ಶ್ರೀಹರಿಯತ್ತ ವಾಲಿದ ಪುರಂದರದಾಸರ ಮನಸ್ಸು ಅವನನ್ನೇ ಕುರಿತು ಚಿಂತಿಸಿ, ಅವನನ್ನು ಕಾಣಲು ಹಾತೊರೆದಿದೆ. ಅದುವರೆಗಿನ ತಮ್ಮ ಬಾಳು ವ್ಯರ್ಥವೆನ್ನಿಸಿ, ತಮ್ಮ ಅಪರಾಧಗಳನ್ನೆಲ್ಲ ಹರಿಯ ಎದುರಿನಲ್ಲಿ ತೋಡಿಕೊಂಡಿರುವರು: **ಒಂದಪರಾಧವೆ ಹರಿಹರಿ ಒಂದೊಂದೂ ಪರ್ವತದಂತಿಹುದೊ ದೇವಾ** ಎಂದು ಪಶ್ಚಾತ್ತಾಪಪಟ್ಟು **ಮನಸು ನಿಲಿಸುವುದು ಬಲು ಕಠಿಣ...., ಆವಿನ ಕೊಂಬಿನ ತುದಿಯಲ್ಲಿ ಸಾಸಿವೆಕಾಳು ನಿಲ್ಲುವಷ್ಟು ಹೊತ್ತಾದರೂ ನನ್ನ ಚಂಚಲ ಮನಸ್ಸು ನಿನ್ನಲ್ಲಿ ನಿಲ್ಲಲಿ** ಎಂದು ಹಲುಬಿ ಹಂಬಲಿಸುವರು. **ದಾಸನ ಮಾಡಿಕೊ ಎನ್ನ ಸ್ವಾಮಿ ಸಾಸಿರನಾಮದ ವೆಂಕಟರಮಣ** ಎಂದು ದಾಸ್ಯಭಾವದಿಂದ ಹರಿಯಲ್ಲಿ ಸಂಪೂರ್ಣ ಶರಣಾಗತರಾಗಿ, **ಹಾಲಲ್ಲಾದರೂ ಅದ್ದು ನೀರಲ್ಲಾದರೂ ಅದ್ದು** ಎನ್ನುತ್ತಾ, ಎಲ್ಲವನ್ನೂ ಹರಿಗೆ ಒಪ್ಪಿಸುವರು. ಎಷ್ಟು ಬೇಡಿಕೊಂಡರೂ ಒಲಿಯದ ಅವನ ಮೇಲೆ ದಾಸರಿಗೆ ಎಲ್ಲಿಲ್ಲದ ಸಿಟ್ಟು, **ಆರು ಬದುಕಿದರಯ್ಯ ಹರಿ ನಿನ್ನ ನಂಬಿ, ತೋರು ಈ ಧರೆಯೊಳಗೆ ಒಬ್ಬರನು ಕಾಣೆ** ಎಂದು ಹರಿಯನ್ನು ಮೂದಲಿಸುವರು.

ನಿನ್ನಂಥ ಸ್ವಾಮಿ ಎನಗುಂಟು ನಿನಗಿಲ್ಲ
ನಿನ್ನಂಥ ತಂದೆ ಎನಗುಂಟು ನಿನಗಿಲ್ಲ
ನಿನ್ನಂಥ ದೊರೆ ಎನಗುಂಟು ನಿನಗಿಲ್ಲ
ನೀನೆ ಪರದೇಶಿ ನಾನೆ ಸ್ವದೇಶಿ
ನಿನ್ನರಸಿ ಲಕುಮಿ ಎನ್ನ ತಾಯಿ
ನಿನ್ನ ತಾಯ ತೋರೋ ಪುರಂದರವಿಠಲ

ಎಂದು ಶ್ರೀಹರಿಗೇ ಸಖ್ಯಭಾವದಿಂದ ಸವಾಲು ಹಾಕುವರು.

ಇದ್ದಕ್ಕಿದ್ದಂತೆ ಶ್ರೀಹರಿಯು ದಾಸರಿಗೆ ಪುಟ್ಟ ಮಗುವಾಗಿ ಕಂಡಿದ್ದಾನೆ. ತಾವು ತಾಯಿ ಯಶೋದೆಯಾಗಿ, ಗೋಕುಲದ ಗೋಪಿಯರಲ್ಲೊಬ್ಬರಾಗಿ ವಾತ್ಸಲ್ಯಭಾವದಿಂದ ಮಗು ಕೃಷ್ಣನನ್ನು ಓಲೈಸುವರು. ತುಡುಗ ಕೃಷ್ಣನನ್ನು, ಕದ್ದ ಹಾಲು ಮೊಸರು ಬೆಣ್ಣೆಗಳ ಸಹಿತ ಹಿಡಿದು ತಂದು ಯಶೋದೆಯ ಮುಂದೆ ಹೀಗೆ ನಿಲ್ಲಿಸಿದ್ದಾರೆ:

ಇದೆ ಇದೆ ಕೈಬೆಣ್ಣೆ ಇದೊ ಅಂಗೈ ಸಿಕ್ಕಿತು
ಇದೆ ಇದೆ ಕಟವಾಯಿ ಇದೇ ಸುರಿಯುವ ಬೆಣ್ಣೆ
ಇದೆ ಇದೆ ಗೋಪೀದೇವಿ ನಿನ್ನ ಮಗನು ಕಳ್ಳ
ಇದೆ ಇದೆ ಹಿಡಿದುತಂದೆವು ನೋಡೆ
ಹದುಳದಿಂದಿರೆ ಲೇಸು ಇಲ್ಲದಿದ್ದರೆ ನಿನ್ನ
ತದುಕಿಬಿಡುವೆನಯ್ಯ ಪುರಂದರವಿಠಲ

ಎಂತಹ ಮೋಹಕ ಚಿತ್ರ!

ಪೊಂಬಟ್ಟೆ ಪಾಲ್ಗೊಸರಲಿ ತೋರಿದೆ
ಕಂಬುಕಂಧರ ಕೆನೆಬೆಣ್ಣೆಯಲೊರೆದಿದೆ
ಅಂಬುಜನಾಭ ನೀ ಎಲ್ಲೆಲ್ಲಿ ತುಡುತಿಂದೆ
ಎಂಬ ಗೋಪಿಗೆ ಕೃಷ್ಣ ಅಂಜುತಿದ್ದುದ ಕಂಡೆ

ಎನ್ನುತ್ತಾರೆ ಪುರಂದರದಾಸರು. ಒಬ್ಬ ತಾಯಿ ಮಗುವನ್ನು ಬೆಳಿಗ್ಗೆ ಎಬ್ಬಿಸುವುದರಿಂದ ಹಿಡಿದು, ರಾತ್ರಿ ಜೋಗುಳ ಹಾಡಿ ಮಲಗಿಸುವವರೆಗೂ ಯಾವ ಯಾವ ರೀತಿಯಲ್ಲಿ ಅದರ ಸೇವೆ ಮಾಡುತ್ತಾಳೋ ಆ ಎಲ್ಲ ರೀತಿಗಳಿಂದಲೂ ದಾಸರು ಮಗು ಕೃಷ್ಣನೊಂದಿಗೆ ಆಡಿ ಆಡಿಸಿ ನೀರೆರೆದು ಪಾಡಿ ಊಡಿ ಅಲಂಕರಿಸಿ ಜೋಗುಳ ಹಾಡಿ ಅವನನ್ನು ಮಲಗಿಸಿರುವರು. **ಹೊಡೆಮರಳ ಕಲಿತ ಕೃಷ್ಣ ನಾಗರ ಹೆಡೆಯಂತೆ ತಲೆಯೆತ್ತಲು ಕಲಿತ** ಎಂದು ಮಗು ಕೃಷ್ಣ ಬೋರಲಾಗಿ ತಲೆಯೆತ್ತಿದ್ದನ್ನು, ಉಗ್ಗು ಉಗ್ಗು ಎಂದು ಮಾತು ಕಲಿತದ್ದನ್ನು ಕಂಡು ಸಂಭ್ರಮಿಸಿದ್ದಾರೆ.

ಎಲ್ಲಕ್ಕಿಂತ ಹೆಚ್ಚಾಗಿ ಶ್ರೀಹರಿ 'ಪತಿ', ತಾವು ಅವನ 'ಸತಿ'ಯೆಂದು ಭಾವಿಸಿ, ಹೆಣ್ತನವನ್ನು ಆರೋಪಿಸಿಕೊಂಡು ಮಧುರಭಾವದಿಂದ ಭಕ್ತಿ ಸಾಧನೆ ಮಾಡಿದ್ದಾರೆ, ಪುರಂದರದಾಸರು :

ಅಚ್ಚುತ ಸುಳಿದ ಎನ್ನ ಕಣ್ಣ ಮುಂದೆ ಅವ್ವ
ಅನಂತ ಸುಳಿದ ಎನ್ನ ಕಣ್ಣ ಮುಂದೆ ಅವ್ವ
ಕಸ್ತೂರಿಮೃಗದಂತೆ ಘಮಘಮಿಸುತ
ನಗುತ ನೋಡುತ ನುಡಿಯುತ ನುಡಿಸುತ
ಸೆರೆಗೊಂಡ ಸೂರೆಗೊಂಡ ಪುರಂದರವಿಠಲ

ಸುಳಾದಿಯ ಈ ಭಾಗವನ್ನು ಓದಿದಾಗ ಅಕ್ಕಮಹಾದೇವಿಯ 'ಸುಳಿಪಲ್ಲಗೊರವ' ನೆನಪಾಗುತ್ತಾನೆ. ಭಕ್ತ ಭಗವಂತರ ನಡುವಣ ಈ ಮೇಲಿನ ಸಂಬಂಧಗಳು ನಮ್ಮೆಲ್ಲರ ಬದುಕಿನಲ್ಲೂ ಹಾಸುಹೊಕ್ಕಾಗಿ ಇರುವಂಥವು. ಸೇವಕತನದ ದೈನ್ಯ, ಗೆಳೆತನದ ರುಚಿ. ಪ್ರಣಯದ ಸವಿ, ಮಕ್ಕಳು ಕೊಡುವ ಆನಂದ – ಎಲ್ಲವೂ ನಮ್ಮ ಅನುಭವಕ್ಕೆ ದಕ್ಕುವಂಥವೇ. ಹಾಗಾಗಿ ಇಂಥ ಭಾವಾನುಭವಗಳನ್ನು ಮೊಗೆ ಮೊಗೆದುಕೊಡುವ ಪುರಂದರದಾಸರ ನೂರಾರು ಕೀರ್ತನೆಗಳು ನಮಗೆ ಹೆಚ್ಚು ಆಪ್ತವಾಗುತ್ತವೆ; ನಮ್ಮ ಮನಸ್ಸು ಅನುಭವಗಳನ್ನೇ ಅಲ್ಲಿ ಬಿಚ್ಚಿಟ್ಟಿರುವಂತೆ ಭಾಸವಾಗುತ್ತದೆ.

*(ಮುಂದುವರಿಯುವುದು)*